ಇ) 1996–97ರಿಂದ 2003–04ರವರೆಗೆ ಆಯಾ ಶೈಕ್ಷಣಿಕ ವರ್ಷದ ಜುಲೈ ಅಂತ್ಯದೊಳಗೆ ಪಠ್ಯ ಪುಸ್ತಕಗಳು ದೊರಕಿವೆ:2004–05ರಲ್ಲಿ ಮಾತ್ರ ಡಿಸೆಂಬರ್‌ವರೆವಿಗೆ ವಿಳಂಬವಾಗಿದೆ. 2005–06ನೇ ಸಾಲಿನಲ್ಲಿ ಮೇ 30 ರಂದೇ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಿದೆ. ಮಾರಾಟ ವಿಭಾಗದ ಪಠ್ಯಪುಸ್ತಕಗಳ ಕೆಲವು ಶೀರ್ಷಿಕೆಗಳಲ್ಲಿ ಸ್ವಲ್ಪ ಕೊರತೆ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಕೊರತೆಯನ್ನು ಸರಿದೂಗಿಸಲು ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲ್ಲೂಕು ಮಳಿಗೆಗಳಲ್ಲಿ ಉಚಿತ ವಿತರಣೆಯ ಪಠ್ಯಪುಸ್ತಕಗಳ ಪೈಕಿ ವಿತರಣೆಯಾದ ನಂತರ ಹೆಚ್ಚುವರಿಯಾಗಿ ಉಳಿದಿರುವ ಸುಮಾರು 20ಲಕ್ಷ ಪಠ್ಯಪುಸ್ತಕಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗಿದೆ. ಪುಸ್ತಕಗಳನ್ನು ತುರ್ತಾಗಿ ಮುದ್ರಿಸಿ ಬಿಡುಗಡೆ ಮಾಡುವಂತೆ ಖಾಸಗಿಮುದ್ರಕರಿಗೆ ಆದೇಶ ನೀಡಲಾಗಿದೆ.

5020 (5612) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೋಣ ತಾಲ್ಲೂಕು ಹಾಗೂ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ;

ಆ) ಮಿನಿ ವಾಟರ್ ಟ್ಯಾಂಕ್ ಹಾಗೂ ಓವರ್ ಟ್ಯಾಂಕ್ ಸೌಲಭ್ಯಗಳನ್ನು ಹೊಂದದೆ ಇರುವ ಗ್ರಾಮಗಳು ಯಾವುವು;

ಇ) ಹಾಲಿ ಕುಡಿಯುವ ನೀರಿಗಾಗಿ ಎಷ್ಟು ಕೊಳವೆ ಬಾವಿಗಳ ಬೇಡಿಕೆ ಇದೆ, ಬೇಡಿಕೆಯನ್ನು ಯಾವ ಯಾವ ಯೋಜನೆಯಡಿ ಪೂರೈಸಲಾಗುವುದು;

ಬಿ. ಸತ್ಯನಾರಾಯಣ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. :

ಅ) ರೋಣ ತಾಲ್ಲೂಕು ವ್ಯಾಪ್ತಿಯಲ್ಲಿನ ರೋಣ ಕ್ಷೇತ್ರದಲ್ಲಿ 896 ಕೊಳವೆ ಬಾವಿಗಳನ್ನು ಹಾಗೂ ಒಟ್ಟಾರೆ ರೋಣ ಕ್ಷೇತ್ರದಲ್ಲಿ 1188 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ.

ಆ) ರೋಣ ತಾಲ್ಲೂಕು ಹಾಗೂ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಅರ್ಹ ಗ್ರಾಮಗಳಿಗೆ ಜನಸಂಖ್ಯೆ ಆಧಾರಿತ ಚಾಲ್ತಿ ಮಾರ್ಗಸೂಚಿಗಳನ್ವಯ ಈ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಹಾಲಿ ಕುಡಿಯುವ ನೀರಿಗಾಗಿ 40 ಕೊಳವೆ ಬಾವಿಗಳ ಬೇಡಿಕೆಯಿದೆ. ಈ ಬೇಡಿಕೆಗಳನ್ನು 2005–06ನೇ ಸಾಲಿನ ಕುಡಿಯುವ ನೀರಿನ ARWSP, MNP, SCP ಇತ್ಯಾದಿ ಯೋಜನೆಗಳ ಕ್ರಿಯಾ ಯೋಜನೆಯಡಿ ಪೂರೈಸಲಾಗುವುದು.

5021 (5613) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) :– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೋಣ ತಾಲ್ಲೂಕು ಗಜೇಂದ್ರ ಗಡದಲ್ಲಿ ಪ್ರಥಮದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಎಷ್ಟು ಕೊಠಡಿಗಳ ನಿರ್ಮಾಣ ಮಾಡಲಾಗುತ್ತಿದೆ; ಕಾಮಗಾರಿ ಯಾವ ಹಂತದಲ್ಲಿದೆ;